
# ನಾಲ್ವರು ಮಹಾಶಿಷ್ಯರು

❑ ಸ್ವಾಮಿ ರಾಘವೇಶಾನಂದ

**ಆಚಾರ್ಯ ಶಂಕರರ ಮಹೋನ್ನತ ಆಧ್ಯಾತ್ಮಿಕ ವ್ಯಕ್ತಿತ್ವಕ್ಕೆ ಮನಸೋತ ಸಮಕಾಲೀನ ಮೇಧಾವಿಗಳು ಹಾಗೂ ಆಧ್ಯಾತ್ಮಿಕ ಪಿಪಾಸುಗಳು ಅವರಲ್ಲಿ ಶಿಷ್ಯತ್ವ ಸ್ವೀಕರಿಸಿ ಆಚಾರ್ಯರ ಪರಂಪರೆಯ ಮಹಿಮೆಯನ್ನು ಎತ್ತಿಹಿಡಿದರು. ಅವರಲ್ಲಿನ ನಾಲ್ವರು ಪ್ರಮುಖ ಶಿಷ್ಯರ ಪರಿಚಯವನ್ನು ಸರಳವಾದ, ಮನೋಹರವಾದ ಶೈಲಿಯಲ್ಲಿ ಮಾಡಿಕೊಟ್ಟಿರುವ ಸ್ವಾಮಿ ರಾಘವೇಶಾನಂದರು ಬೆಂಗಳೂರಿನ ಅಲಸೂರಿನಲ್ಲಿರುವ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾಗಿರುವರು. ಏಪ್ರಿಲ್ ೨೪ರಂದು ಶಂಕರ ಜಯಂತಿಯನ್ನು ಆಚರಿಸಲಾಗುತ್ತದೆ.**



**ಸ**ನಾತನ ಧರ್ಮವು ಹೀನಸ್ಥಿತಿಯಲ್ಲಿದ್ದಾಗ ಪುನರ್ಜೀವ ಕೊಟ್ಟವರು ಶಂಕರಾಚಾರ್ಯರು. ಭಾರತಮಾತೆಯ ಉದರದಲ್ಲಿ ಜನಿಸಿದ ಜಗನ್ಮಾನ್ಯರಾದ ಯುಗಪುರುಷರಲ್ಲಿಯೂ ದಾರ್ಶನಿಕರಲ್ಲಿಯೂ ಮಹಾತ್ಮರಲ್ಲಿಯೂ ಶ್ರೀಶಂಕರಾಚಾರ್ಯರು ಅನೇಕ ದೃಷ್ಟಿಯಿಂದ ಅಸಾಮಾನ್ಯರು. ಇವರ ಬಳಿ ಬಂದ ಶಿಷ್ಯರಲ್ಲಿ ನಾಲ್ವರು ಪ್ರಮುಖರು, ದಿಗ್ಗಜಗಳು. ಅವರಲ್ಲಿ ಮೊದಲಿಗರು ಪದ್ಮಪಾದರು.

ಧರ್ಮಸಂಸ್ಥಾಪನೆಗಾಗಿ ಶಂಕರಾಚಾರ್ಯರು ದೇಶದ ಎಲ್ಲ ಭಾಗಗಳಿಗೂ ಭೇಟಿಕೊಟ್ಟು, ಧರ್ಮಪ್ರಚಾರ ಮಾಡಿ ಜನರ ಅಜ್ಞಾನವನ್ನು ತೊಡೆದು ಹಾಕುತ್ತಿದ್ದರು. ಹಾಗೆ ಅವರು ಕಾಶಿಗೆ ಭೇಟಿಕೊಟ್ಟು ಅಲ್ಲಿ ಬಹಳ ಕಾಲವಿದ್ದರು. ಆಗ ಅವರ ಬಳಿಗೆ ಹಲವಾರು ಪಂಡಿತರು ಮತ್ತು ಆಧ್ಯಾತ್ಮಿಕ ಪಿಪಾಸುಗಳು ಬರುತ್ತಿದ್ದರು. ಕಾಶಿಯಲ್ಲಿ ಚೋಳದೇಶದ ಅಹೋಬಿಲ ಕ್ಷೇತ್ರದ ವಿಷ್ಣುಶರ್ಮನೆಂಬ ಒಬ್ಬ ಬ್ರಹ್ಮಚಾರಿ ಇದ್ದನು. ಅವನು ಒಂದು ದಿವಸ ಶಂಕರಾಚಾರ್ಯರ ಬಳಿ ಬಂದು ಅವರಿಗೆ ನಮಸ್ಕರಿಸಿ ತನ್ನನ್ನು ಶಿಷ್ಯನನ್ನಾಗಿ ಪರಿಗ್ರಹಿಸಬೇಕೆಂದು ಪ್ರಾರ್ಥಿಸಿದನು. ಶಂಕರರು ಅವನ ಹಿನ್ನೆಲೆಯನ್ನು ಪ್ರಶ್ನಿಸಿದರು. ಅದಕ್ಕೆ ಅವನು "ನನ್ನ ನಿಜಸ್ವರೂಪವೆಂದರೆ ನಾನು ನಿತ್ಯ ಶುದ್ಧ-ಬುದ್ಧ-ಮುಕ್ತ ಸ್ವಭಾವನಾದ ಪರಬ್ರಹ್ಮ. ಅದೇ ನನ್ನ ವಾಸಸ್ಥಾನ. ತಾವು ನನ್ನ ಲೌಕಿಕ ಹಿನ್ನೆಲೆಯನ್ನು ಕೇಳುತ್ತಿದ್ದರೆ, ನನ್ನ ಹೆಸರು ವಿಷ್ಣುಶರ್ಮ. ಮಾಧವ ಶರ್ಮ ಹಾಗೂ ಲಕ್ಷ್ಮೀದೇವಿಯವರು ಈ ದೇಹಕ್ಕೆ ಜನ್ಮವಿತ್ತವರು. ಮಾತಾಪಿತೃಗಳು ಬಾಲ್ಯದಲ್ಲಿಯೇ ದೈವಾಧೀನರಾದರು. ಅನಾಥನಾಗಿದ್ದ ನನಗೆ ಒಂದು ದಿನ ಮಹಾತ್ಮರೊಬ್ಬರ ಸಂದರ್ಶನವಾಯಿತು. ಅವರು ಶ್ರೀ ನೃಸಿಂಹಸ್ವಾಮಿಯ ಮಂತ್ರೋಪದೇಶವನ್ನು ಮಾಡಿದರು. ವಿದ್ಯಾರ್ಜನೆಗಾಗಿ ಕಾಶಿಗೆ ಬಂದು ಇಲ್ಲೇ ನೆಲೆಸಿದ್ದೇನೆ" ಎಂದು ಹೇಳಿದನು.

ಆಚಾರ್ಯರು ಅವನಲ್ಲಿರುವ ಅದ್ವಿತೀಯ ಬುದ್ಧಿಶಕ್ತಿ, ಅಗಾಧ ಮೇಧಾಶಕ್ತಿ, ವೇದಾಂತದಲ್ಲಿ ಆಸಕ್ತಿ, ಸಂಸಾರದಲ್ಲಿ ವಿರಕ್ತಿ, ಆತ್ಮಚಿಂತನೆಯಲ್ಲಿ ಅನುರಕ್ತಿ, ಭಗವಂತನಲ್ಲಿ ಭಕ್ತಿ, ಧ್ಯಾನ ತಪಸ್ಸುಗಳಲ್ಲಿ ಪ್ರವೃತ್ತಿ ಮುಂತಾದ ಗುಣಗಳನ್ನು ಕಂಡು ಮೆಚ್ಚಿ, ಸಂತೋಷದಿಂದ ವಿಧ್ಯುಕ್ತವಾಗಿ ಸಂನ್ಯಾಸ ದೀಕ್ಷೆ ಕೊಟ್ಟು, ಮಹಾವಾಕ್ಯಗಳ ರಹಸ್ಯವನ್ನು ಉಪದೇಶಿಸಿದರು. ಅವನಿಗೆ "ಸನಂದನಾಚಾರ್ಯ" ಎಂದು ಹೊಸ ಹೆಸರನ್ನು ಅನುಗ್ರಹಿಸಿ ತಮ್ಮ ಮೊದಲನೆಯ ಪ್ರಧಾನ ಶಿಷ್ಯನನ್ನಾಗಿ ಸ್ವೀಕರಿಸಿದರು.

ನಂತರ ಸನಂದನಾಚಾರ್ಯನು ಯಾವಾಗಲೂ ಶಂಕರರ ಜೊತೆಯಲ್ಲೇ ಇದ್ದು, ಅವರೊಡನೆ ಎಲ್ಲೆಡೆ ಪ್ರವಾಸ ಮಾಡುತ್ತಿದ್ದನು. ಶ್ರೀಶಂಕರಾಚಾರ್ಯರು ಶಿವನ ಆಣತಿಯ ಮೇರೆಗೆ ಹಿಮಾಲಯದ ಬದರಿಧಾಮಕ್ಕೆ ಬಂದು ಅಲ್ಲಿಯ ಸಮೀಪದಲ್ಲಿರುವ ವ್ಯಾಸಗುಹೆಯಲ್ಲಿ ನಾಲ್ಕು ವರ್ಷಗಳಿದ್ದು ದಶೋಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಗೆ ಭಾಷ್ಯಗಳನ್ನು ರಚಿಸಿದರು. ಅವುಗಳ ವಿವರಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು, ಅವುಗಳ ಪ್ರವಚನ ಮಾಡಬೇಕೆಂದು ಶಂಕರರ ಶಿಷ್ಯರೂ ಸ್ಥಳೀಯ ಸಾಧುಗಳೂ ಅವರನ್ನು ಪ್ರಾರ್ಥಿಸಿದರು. ಅದಕ್ಕೆ ಒಪ್ಪಿಕೊಂಡು ಬಿಡುವಿನ ಸಮಯದಲ್ಲೆಲ್ಲಾ ಪ್ರವಚನ ಮಾಡುತ್ತಿದ್ದರು. ಸನಂದನನಿಗೆ ಇದರಲ್ಲಿರುವ ವಿಶೇಷ ಆಸಕ್ತಿಯನ್ನು ಗಮನಿಸಿ, ಅವನ ಶ್ರದ್ಧೆಯನ್ನು ಮೆಚ್ಚಿ, ಅವನಿಗೆ ದಿನದಲ್ಲಿ

ಮೂರು ಬಾರಿ ಪ್ರವಚನ ಮಾಡುತ್ತಿದ್ದರು. ಇದರಿಂದ ಇತರ ಶಿಷ್ಯರಿಗೆ ಅಸೂಯೆಯುಂಟಾಯಿತು. ಇದನ್ನು ಗಮನಿಸಿದ ಆಚಾರ್ಯರು, ಸನಂದನನ ಯೋಗ್ಯತೆಯನ್ನು ಅವರಿಗೆ ಮನಗಾಣಿಸಲು ಸರಿಯಾದ ಅವಕಾಶಕ್ಕೆ ಕಾಯುತ್ತಿದ್ದರು.

ಒಂದು ದಿನ ಆಚಾರ್ಯರು ಅಲಕನಂದಾ ನದಿಯ ದಡದಲ್ಲಿ ಇತರ ಶಿಷ್ಯರೊಡನೆ ಕುಳಿತಿದ್ದರು. ಆಚೆಯ ದಡದಲ್ಲಿ ಸನಂದನನು ಶಂಕರಾಚಾರ್ಯರ ವಸ್ತ್ರಗಳನ್ನು ಒಗೆದು ಬಿಸಿಲಿನಲ್ಲಿ ಒಣಗಿಸುತ್ತಿದ್ದನು. ಆಗ ಆಚಾರ್ಯರು ಇದ್ದಕ್ಕಿದ್ದಂತೆ ಆರ್ತಸ್ವರದಿಂದ ಎರಡೂ ಕೈಗಳನ್ನು ಮೇಲೆತ್ತಿ, ಅವನಿಗೆ ಕೇಳುವಂತೆ "ಸನಂದನ, ಸನಂದನ" ಎಂದು ಜೋರಾಗಿ ಕೂಗಲಾರಂಭಿಸಿದರು. ಗುರುಗಳ ಧ್ವನಿಯನ್ನು ಗುರುತಿಸಿದ ಸನಂದನ, ಗುರುಗಳಿಗೆ ಏನೋ ಆಪತ್ತು ಒದಗಿದೆಯೆಂದು ಭಾವಿಸಿ, ಆ ರಭಸದಿಂದ ಭೋರ್ಗರೆಯುತ್ತಿದ್ದ ನದಿಯ ಮೇಲೆ ತನ್ನ ದೇಹದ ಪರಿವೆಯೇ ಇಲ್ಲದೆ, ನೆಲದ ಮೇಲೆ ನಡೆಯುವಂತೆ ನಡೆದು, ಓಡೋಡಿ ಬಂದನು. ಅವನ ನಿಷ್ಕಳಂಕ, ಅನನ್ಯ ಗುರುಭಕ್ತಿಗೆ ಮೆಚ್ಚಿದ ಭಾಗೀರಥಿಯು ಸಂತೋಷಗೊಂಡು ಅವನು ಪಾದವಿಡುವಲ್ಲೆಲ್ಲಾ ಒಂದೊಂದು ಕಮಲ ಪುಷ್ಪವನ್ನು ಅರಳಿಸಿ, ಅವನು ನೀರಿನಲ್ಲಿ ಮುಳುಗದೆ ಸರಾಗವಾಗಿ ನಡೆಯುವಂತೆ ಮಾಡಿದಳು. ಪಾದಗಳ ಕೆಳಗೆ ಪದ್ಮಗಳು ಉದ್ಭವವಾಗುತ್ತಿದ್ದ ಅರಿವೂ ಇಲ್ಲದೆ, ತನ್ನ ಗುರುವಿಗೆ ಏನು ಆಪತ್ತು ಒದಗಿದೆಯೋ ಎಂಬ ಆತಂಕದಿಂದ, ಓಡೋಡಿ ಬಂದನು. ಆಚಾರ್ಯರೂ, ಇತರ ಶಿಷ್ಯರೂ ಈ ಅಪೂರ್ವ ದೃಶ್ಯವನ್ನು ಸ್ತಬ್ಧರಾಗಿ ನೋಡುತ್ತಲೇ ಇದ್ದರು. ನಂತರ ಶಂಕರರು, "ಸನಂದನ, ನೀನು ನದಿಯನ್ನು ಹೇಗೆ ದಾಟಿದೆ?" ಎಂದು ಕೇಳಿದರು. "ತಾವು ಕರೆದಿರಿ, ತಮಗೇನಾಯಿತೋ ಎಂಬ ಭಯದಿಂದ ನಾನು ಓಡೋಡಿ ಬಂದೆ" ಎಂದನು. ಆ ಶಿಷ್ಯರು ಸನಂದನನಲ್ಲಿ ಎಂತಹ ಅದ್ಭುತ ಗುರುಭಕ್ತಿ ಇದೆ ಎಂಬುದನ್ನು ಕಂಡು ನಾಚಿ ನೀರಾದರು. ಪದ್ಮಪುಷ್ಪಗಳ ಮೇಲೆ ಪಾದಗಳನ್ನಿಡುತ್ತಾ ಬಂದ ಸನಂದನನಿಗೆ "ಪದ್ಮಪಾದಾಚಾರ್ಯ"ನೆಂದು ಹೆಸರಾಯಿತು.

ಒಂದು ದಿನ ಆಚಾರ್ಯರು ಪ್ರವಚನ ಮಾಡುತ್ತಿದ್ದಾಗ, ಒಬ್ಬ ಮುದುಕ ಮುಗುಳುನಗೆ ನಗುತ್ತಾ ಆಚಾರ್ಯರ ಬಳಿಗೆ ಬಂದನು. ಹೊರನೋಟಕ್ಕೆ ಅವನೊಬ್ಬ ತಪಸ್ವಿಯಂತೆ ತೋರುತ್ತಿದ್ದನು. ವಿನಯದಿಂದ ಪ್ರವಚನ ಕೇಳಲು ಅನುಮತಿಯನ್ನು ಪಡೆದು, ಕುಳಿತು ಮಧ್ಯೆಮಧ್ಯೆ ಪ್ರಶ್ನೆ ಹಾಕಲಾರಂಭಿಸಿದನು. ಆಚಾರ್ಯರು ಸೂಕ್ತ ವಿವರಣೆ ನೀಡುತ್ತಿದ್ದರು. ಕೊನೆಗೆ ಅದು ದೊಡ್ಡ ಚರ್ಚೆಗೆ ತಿರುಗಿ, ವಾದ-ವಿವಾದ ಕ್ರಮೇಣ ಗಂಭೀರವಾಗಿ ಪರಿಣಮಿಸಿತು. ಪ್ರಶ್ನೆ-ಉತ್ತರ, ಆಕ್ಷೇಪ-ಪರಿಹಾರ ಹೀಗೆ ಚರ್ಚೆ ಸುಮಾರು ಒಂದು ವಾರ ಕಾಲ ನಡೆಯಿತು. ಇದನ್ನು ಮೊದಲಿನಿಂದಲೂ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಪದ್ಮಪಾದರು, ಇಷ್ಟೊಂದು ವಿಷಯ ತಿಳಿದ ಬ್ರಾಹ್ಮಣನು ಸಾಮಾನ್ಯನಲ್ಲ, ಇವನು ಯಾರಿರಬಹುದು? ಎಂದು ಅನುಮಾನ ಪಟ್ಟರು. ಕಣ್ಣು ಮುಚ್ಚಿ ಧ್ಯಾನಿಸುತ್ತ ದಿವ್ಯದೃಷ್ಟಿಯಿಂದ ಬಂದಿರುವವರು ಬೇರೆ ಯಾರೂ ಅಲ್ಲ, ಸಾಕ್ಷಾತ್ ವ್ಯಾಸ ಮಹರ್ಷಿಯೇ ಎಂದು ಅರಿತು, ಒಂದು ಶ್ಲೋಕದ ಮೂಲಕ ಅದನ್ನು ಶಂಕರರಿಗೆ ತಿಳಿಸಿದರು. ಪದ್ಮಪಾದರು ಹೀಗೆ ಹೇಳಿದರು:

ಶಂಕರಃ ಶಂಕರಃ ಸಾಕ್ಷಾತ್ ವ್ಯಾಸೋ ನಾರಾಯಣೋ ಹರಿಃ ।
ಏತಯೋರುಭಯೋರ್ಮಧ್ಯೇ ಕಿಂಕರಃ ಕಿಂ ಕರಿಷ್ಯತಿ ॥

—"ಶಂಕರರು ಸಾಕ್ಷಾತ್ ಶಂಕರನ ಅವತಾರ, ವ್ಯಾಸರಾದರೋ ಸಾಕ್ಷಾತ್ ನಾರಾಯಣನ ಅವತಾರ. ಇವರಿಬ್ಬರ ಮಧ್ಯೆ ವಿವಾದ ಶುರುವಾದರೆ ಬಡಪಾಯಿ ಕಿಂಕರ ಏನು ಮಾಡಬೇಕು?" ಅದನ್ನು ಕೇಳಿದ ಕೂಡಲೇ ಆಚಾರ್ಯರು ಬಂದಿರುವುದು ವ್ಯಾಸ ಮಹರ್ಷಿಗಳೇ ಎಂದು ಅರ್ಥಮಾಡಿಕೊಂಡು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಉದ್ಧಟತನದಿಂದ ವಾದಮಾಡಿದುದಕ್ಕೆ ಅವರ ಬಳಿ ಕ್ಷಮೆ ಬೇಡಿದರು. ಸಂತೋಷಗೊಂಡ ವ್ಯಾಸರು, "ಮಗು, ನಿನ್ನ ಆಯುಸ್ಸು ಇನ್ನೇನು ಮುಗಿಯಲಿದೆ. ಆದರೆ ನೀನು ಮಾಡಬೇಕಾದ ಕೆಲಸ ಇನ್ನೂ ಬಹಳವಾಗಿ ಉಳಿದಿರುವುದರಿಂದ ನನ್ನ ತಪಸ್ಸಿನ ಬಲದಿಂದ ನಿನ್ನ ಆಯುಸ್ಸನ್ನು ಇನ್ನೂ ಹದಿನಾರು ವರ್ಷಗಳ ಕಾಲ ಹೆಚ್ಚಿಸಿದ್ದೇನೆ " ಎಂದು ಹೇಳಿ ಮಂತ್ರಪುರಸ್ಸರವಾಗಿ ಆಚಾರ್ಯರಿಗಿದ್ದ ಮೃತ್ಯುಯೋಗವನ್ನು ನಿವಾರಿಸಿದರು.

ಆಚಾರ್ಯರು ದಿಗ್ವಿಜಯ ಯಾತ್ರೆ ಮಾಡುತ್ತ ಆಂಧ್ರಪ್ರದೇಶದ ಶ್ರೀಶೈಲಕ್ಕೆ ಬಂದರು. ಆ ಕ್ಷೇತ್ರವು ಪ್ರಾಚೀನ ಕಾಲದಿಂದಲೂ ಮಂತ್ರ ಮತ್ತು ತಾಂತ್ರಿಕ ಉಪಾಸನೆಗಳಿಗೆ ಪ್ರಸಿದ್ಧವಾಗಿತ್ತು. ಆ ಉಪಾಸಕರನ್ನು ಕಾಪಾಲಿಕ ತಾಂತ್ರಿಕರೆಂದು ಕರೆಯುತ್ತಿದ್ದರು. ಕಾರಣ ಇವರು ಕಪಾಲ ಅಥವಾ ತಲೆಬುರುಡೆಯನ್ನು ತಮ್ಮ ಭಿಕ್ಷಾಪಾತ್ರೆಯಾಗಿ ಉಪಯೋಗಿಸುತ್ತಿದ್ದರು. ಈ ಕಾಪಾಲಿಕರ ನಾಯಕ ಉಗ್ರಭೈರವ. ಇವನು ಶಂಕರಾಚಾರ್ಯರನ್ನು ಕೊಲ್ಲಲು ಸಂಚು ಮಾಡಿದನು. ಕೆಲವು ಕಾಪಾಲಿಕರು ತಮ್ಮ ನಾಯಕನ ಆದೇಶದಂತೆ ಶಂಕರರನ್ನು ಕೊಲ್ಲಲು ಪ್ರಯತ್ನಿಸಿ ವಿಫಲರಾದರು. ಆಗ ಯುಕ್ತಿಯಿಂದ ತನ್ನ ಕಾರ್ಯವನ್ನು ಸಾಧಿಸಲು ಉಗ್ರಭೈರವನು ತೀರ್ಮಾನಿಸಿದನು. ಅವನು ಶಂಕರರ ಶಿಷ್ಯತ್ವವನ್ನು ಸ್ವೀಕರಿಸುವಂತೆ ನಟಿಸುತ್ತಾ, ತನ್ನ ಗರ್ವವನ್ನು ನುಂಗಿ ಅತ್ಯಂತ ನಿಷ್ಠಾವಂತನಂತೆ ಅವರ ಸೇವೆ ಮಾಡುವಂತೆ ತೋರಿಸಿಕೊಳ್ಳುತ್ತಾ ಅವರ ಪ್ರೀತಿಗೆ ಪಾತ್ರನಾದನು.

ಹೀಗೇ ಕೆಲವು ಕಾಲ ಕಳೆಯಿತು. ಒಂದು ದಿನ ಆಚಾರ್ಯರ ಪಾದಗಳಿಗೆ ನಮಸ್ಕರಿಸಿ, ನಯವಿನಯವನ್ನು ಪ್ರದರ್ಶಿಸುತ್ತಾ ಹೀಗೆ ಹೇಳಿದನು : "ಸ್ವಾಮಿ, ನಾನು ಸಶರೀರಿಯಾಗಿ ಕೈಲಾಸ ಸೇರುವ ಸಲುವಾಗಿ ಶಿವನನ್ನು ಕುರಿತು ತಪಸ್ಸನ್ನಾಚರಿಸಿದೆನು. ಆಗ ಪರಮಶಿವನು ಪ್ರತ್ಯಕ್ಷನಾಗಿ, 'ನೀನು ಒಬ್ಬ ಚಕ್ರವರ್ತಿಯ ಅಥವಾ ಬ್ರಹ್ಮಜ್ಞಾನಿಯ ಶಿರಸ್ಸನ್ನು ಆಹುತಿಯಾಗಿ ಸಮರ್ಪಿಸಿದರೆ ನಿನ್ನ ಮನೋಭೀಷ್ಟವು ನೆರವೇರುವುದು' ಎಂದು ಹೇಳಿ ಅಂತರ್ಧಾನನಾದನು. ನನಗೆ ಚಕ್ರವರ್ತಿಯ ತಲೆ ಸಿಕ್ಕುವ ಸಾಧ್ಯತೆಯೇ ಇಲ್ಲ. ಬ್ರಹ್ಮಜ್ಞಾನಿಯಾದ ತಮ್ಮನ್ನು ನೋಡಿದ ಮೇಲೆ ನನಗೆ ಮತ್ತೆ ಆಶೆ ಉದಿಸಿದೆ. ತಾವು ತಮ್ಮ ತಲೆಯನ್ನು ಕರುಣಿಸಿದರೆ ಶಿಷ್ಯನಿಗೆ ಮಹದುಪಕಾರ ಮಾಡಿದಂತಾಗುತ್ತದೆ."

ಕಾಪಾಲಿಕನ ಈ ವಿಚಿತ್ರ ಕೋರಿಕೆಯಿಂದ ಧೃತಿಗೆಡದ ಶಂಕರರು ಅವನಿಗೆ ಹೇಳಿದರು : "ಆಗಲಿ, ನಿನ್ನ ಇಚ್ಛೆ ನೆರವೇರಿಸಿಕೊ. ಆದರೆ ಈ ವಿಷಯ ನನ್ನ ಶಿಷ್ಯರಿಗೆ ತಿಳಿಯದೆ ಇರಲಿ. ನಾಳೆ ಬೆಳಗ್ಗೆ ನನ್ನ ಶಿಷ್ಯರೆಲ್ಲಾ ಪಾತಾಳಗಂಗೆಗೆ ಸ್ನಾನಕ್ಕೆ ಹೋಗಿರುವ ಸಮಯದಲ್ಲಿ ನಿನ್ನ ಆಸೆಯನ್ನು ಪೂರೈಸಿಕೊಳ್ಳಬಹುದು." ಉಗ್ರಭೈರವನಿಗೆ ಅತೀವ ಆನಂದವಾಯಿತು. ಮರುದಿನ ಅರುಣೋದಯಕ್ಕೆ ಮೊದಲೇ ಆಚಾರ್ಯರು ಅನುಷ್ಠಾನವನ್ನು ಮುಗಿಸಿದರು. ಶಿಷ್ಯರೆಲ್ಲರೂ ಸ್ನಾನಕ್ಕೆ ತೆರಳಿದ್ದರು. ಶಂಕರರು ಮನಸ್ಸನ್ನು ಆತ್ಮನಲ್ಲಿ ನಿಲ್ಲಿಸಿ, ಪದ್ಮಾಸನದಲ್ಲಿ ಸಮಾಧಿಸ್ಥರಾಗಿ ಕುಳಿತಿದ್ದರು. ಆ ವೇಳೆಗೆ ಉಗ್ರಭೈರವನು ತನ್ನ ಪೂಜಾಪದ್ಧತಿಗನುಸಾರವಾಗಿ ವಸ್ತ್ರವನ್ನು ಧರಿಸಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಬಂದನು. ಅವನು ತನ್ನ ಪೂಜೆಯನ್ನೆಲ್ಲ ಮುಗಿಸಿ ಭಗವತ್ಪಾದರನ್ನು ಬಲಿಕೊಡುವವನಿದ್ದನು.

ಇತ್ತ ಪದ್ಮಪಾದರಿಗೆ ಸ್ನಾನ ಮಾಡುತ್ತಿರುವಾಗ, ತಮ್ಮ ಗುರುಗಳಿಗೆ ಏನೋ ಅಪಾಯ ಒದಗಿರಬಹುದೆಂಬ ಭಾವನೆ ಬಂದು ಮನಸ್ಸು ತಳಮಳಗೊಳ್ಳಲಾರಂಭಿಸಿತು. ಕೂಡಲೇ ತಮ್ಮ ಉಪಾಸನಾ ದೈವವಾದ ನೃಸಿಂಹಸ್ವಾಮಿಯ ಸ್ತೋತ್ರ ಮಾಡಿದರು. ಆಗ ಅವರ ದೇಹದಲ್ಲಿ ನೃಸಿಂಹಸ್ವಾಮಿಯ ಆವೇಶವಾಯಿತು. ಕೂಡಲೇ ಅವರು ಅವಸರ ಅವಸರವಾಗಿ ಗುರುಗಳ ಬಳಿಗೆ ಓಡಿ ಬಂದರು. ಆ ಸಮಯಕ್ಕೆ ಉಗ್ರಭೈರವನು ಶಂಕರರನ್ನು ಬಲಿಕೊಡಲು ಕತ್ತಿಯನ್ನು ಮೇಲೆತ್ತಿದ್ದನು. ಪದ್ಮಪಾದರು ಆವೇಶದಿಂದ ಅವನ ಕೈಯಿಂದ ಕತ್ತಿಯನ್ನು ಕಿತ್ತುಕೊಂಡು ಅವನ ಕತ್ತನ್ನೇ ಕತ್ತರಿಸಿದರು. ಅವನ ಚೀತ್ಕಾರ, ಪದ್ಮಪಾದರ ಸಿಂಹಘರ್ಜನೆಯಿಂದ ಆಚಾರ್ಯರು ಸಮಾಧಿಯಿಂದ ಬಾಹ್ಯಪ್ರಜ್ಞರಾದರು. ಪದ್ಮಪಾದರು ಉಗ್ರರೂಪದಿಂದ ಕೈಯಲ್ಲಿ ಖಡ್ಗ ಹಿಡಿದು ಕುಣಿದಾಡುತ್ತಿದ್ದರು. ಆಚಾರ್ಯರು ಇವನ ಮೇಲೆ ನರಸಿಂಹದೇವರ ಆವೇಶ ಬಂದಿರುವುದನ್ನು ಅರಿತು, ಅದನ್ನು ಶಾಂತಗೊಳಿಸಲು "ಶ್ರೀಲಕ್ಷ್ಮೀನೃಸಿಂಹ ಪಂಚರತ್ನ"ವೆಂಬ ಸ್ತೋತ್ರವನ್ನು ರಚಿಸಿ, ಪಠಿಸಿದರು. ಆಗ ಪದ್ಮಪಾದರ ಉಗ್ರಭಾವ ಹೋಗಿ ಶಾಂತರಾದರು. ಅಂದಿನಿಂದ ಆಚಾರ್ಯರು ತಮ್ಮ ಪರಂಪರೆಯಲ್ಲಿ ಶ್ರೀನೃಸಿಂಹ ಜಯಂತಿಯ ಆಚರಣೆಗೆ ವ್ಯವಸ್ಥೆ ಮಾಡಿ ಪದ್ಮಪಾದರನ್ನು ಅನುಗ್ರಹಿಸಿದರು.

ಶಂಕರಾಚಾರ್ಯರು ಶೃಂಗೇರಿಯಲ್ಲಿರುವಾಗ ಪದ್ಮಪಾದರಿಗೆ ಶಾರೀರಿಕ ಸೂತ್ರಭಾಷ್ಯಕ್ಕೆ ಒಂದು ವಾರ್ತಿಕೆಯನ್ನು ಬರೆಯುವಂತೆ ತಿಳಿಸಿದರು. ಅವರ ಆಜ್ಞೆಯ ಮೇರೆಗೆ ಒಂದು ವ್ಯಾಖ್ಯೆ ಬರೆದರು. ಅದರ ಪೂರ್ವಭಾಗವು "ಪಂಚಪಾದಿಕಾ" ಎಂದೂ ಉತ್ತರಭಾಗವು "ವೃತ್ತಿ" ಎಂದೂ ಹೆಸರು ಪಡೆದು ಪ್ರಸಿದ್ಧವಾದುವು.

ಕೆಲವು ದಿನಗಳಾದ ಮೇಲೆ ಆಚಾರ್ಯರು ತಮ್ಮ ತಾಯಿಯ ದರ್ಶನ ಪಡೆಯಲು ಕಾಲಡಿಗೆ ಒಮ್ಮೆ ಭೇಟಿ ಕೊಡಲು ನಿಶ್ಚಯಿಸಿದರು. ಉಳಿದ ಶಿಷ್ಯರನ್ನೆಲ್ಲಾ ಅಲ್ಲೇ ಗ್ರಂಥರಚನಾ ಕಾರ್ಯಗಳಲ್ಲಿ ನಿರತರಾಗಿರಬೇಕೆಂದು ತಿಳಿಸಿ ತಾವೊಬ್ಬರೇ ಹೊರಡಲು ಸಿದ್ಧರಾದರು. ಆಗ ಪದ್ಮಪಾದರು ದಕ್ಷಿಣ ಭಾರತದ ತೀರ್ಥಯಾತ್ರೆ ಮಾಡಲು ಗುರುವಿನಿಂದ ಅನುಮತಿ ಬೇಡಿದರು. ಅದಕ್ಕೆ ಶಂಕರರು, "ಯಾತ್ರೆಯ ಸಮಯದಲ್ಲಿ ವಿಶ್ರಾಂತಿಗೆ ಅವಕಾಶವಿರುವುದಿಲ್ಲ. ಅನುಷ್ಠಾನಗಳನ್ನೂ ಸರಿಯಾಗಿ ಮಾಡಲಾಗುವುದಿಲ್ಲ. ಆದುದರಿಂದ ಇಲ್ಲೇ ಇರುವುದು ಒಳ್ಳೆಯದು" ಎಂದರು. ಆದರೆ ಪದ್ಮಪಾದರು ಹಠಹಿಡಿದು ದೈನ್ಯದಿಂದ ಅನುಮತಿ ಯಾಚಿಸಿದರು. ಕೊನೆಗೆ ಅವರ ಒತ್ತಾಯಕ್ಕೆ ಮಣಿದು ಆಚಾರ್ಯರು ಒಪ್ಪಿದರು.

ಪದ್ಮಪಾದರು ಕಾಳಹಸ್ತಿ, ಕಾಂಚಿಪುರಂನಲ್ಲಿ ಅಲ್ಲಿನ ಪ್ರಸಿದ್ಧ ದೇವತೆಗಳನ್ನು ಪೂಜಿಸಿ ರಾಮೇಶ್ವರಕ್ಕೆ ಹೋಗುವ ಮಾರ್ಗವಾಗಿ, ತಮ್ಮ ಜನ್ಮಸ್ಥಳವಾದ ಅಹೋಬಿಲಕ್ಕೆ ಬಂದರು. ಅಲ್ಲಿ ಅವರ ತಾಯಿಯ ಸೋದರನೊಬ್ಬನಿದ್ದನು. ಅವನು ಪೂರ್ವಮೀಮಾಂಸಾ ಶಾಸ್ತ್ರ ಪಂಡಿತನೂ ಕರ್ಮಕಾಂಡ ಪ್ರತಿಪಾದಕನೂ ಜ್ಞಾನಮಾರ್ಗ ವಿರೋಧಿಯೂ ಆಗಿದ್ದನು. ಬಹುಕಾಲದ ನಂತರ ತನ್ನ ಸೋದರಳಿಯ ಬಂದುದು ಸಂತೋಷ ತಂದರೂ ಅವನ ಸಂನ್ಯಾಸ ವೇಷ ಜುಗುಪ್ಸೆ ತಂದಿತು. ಅವರನ್ನು ಒಂದು ದಿನ ತಮ್ಮ ಮನೆಗೆ ಭಿಕ್ಷೆಗೆ ಆಹ್ವಾನಿಸಿದನು. ಅವನು ಪದ್ಮಪಾದರ ಬಳಿ ಇದ್ದ ತಾಡಪತ್ರದ ಕಟ್ಟನ್ನು ನೋಡಿ, "ಅದು ಯಾವ ಗ್ರಂಥ?" ಎಂದು ಕೇಳಿದನು. ಪದ್ಮಪಾದರು "ಇದು ನಮ್ಮ ಗುರು ಶಂಕರಾಚಾರ್ಯರು ಬರೆದಿರುವ ಬ್ರಹ್ಮಸೂತ್ರಭಾಷ್ಯದ ಮೇಲೆ ನಾವು ರಚಿಸಿರುವ ವ್ಯಾಖ್ಯಾನ ಗ್ರಂಥ 'ಪಂಚಪಾದಿಕಾ' " ಎಂದರು. ಅವನು ಅದನ್ನು ತೆಗೆದುಕೊಂಡು ಅವಲೋಕಿಸಿದನು. ವ್ಯಾಖ್ಯಾನವನ್ನು ನೋಡಿ, ಪದ್ಮಪಾದರ ಪ್ರತಿಭೆ, ವಿದ್ವತ್ತು, ನಿರೂಪಣೆಗಳನ್ನು ಅವಲೋಕಿಸಿ ಬೆರಗಾದನು. ದ್ವೇಷ ಹೆಚ್ಚಿತು. ಪೂರ್ವಮೀಮಾಂಸೆಯ ಖಂಡನೆಯನ್ನು ನೋಡಿ ಸಂಕಟವಾಯಿತು. ವಿಷ್ಣುಶರ್ಮನು ಸನಂದನಾಚಾರ್ಯನಾಗಿ, ಪದ್ಮಪಾದಾಚಾರ್ಯನೆಂಬ ಹೆಸರು ಪಡೆದುದನ್ನು ಕೇಳಿ ಅವನಲ್ಲಿ ಮೊದಲೇ ಮಾತ್ಸರ್ಯ ಉಂಟಾಗಿತ್ತು. ಈ ಗ್ರಂಥದಲ್ಲಿ ಕರ್ಮಮಾರ್ಗವನ್ನು ಖಂಡಿಸಿರುವುದರಿಂದ ಅವನ ಅಸಮಾಧಾನ ಸಹಿಸಲಾಗಲಿಲ್ಲ. ಆ ಗ್ರಂಥವನ್ನು ಹೇಗಾದರೂ ನಾಶಮಾಡಬೇಕೆಂದು ಯೋಚಿಸಲಾರಂಭಿಸಿದನು.

ಪದ್ಮಪಾದರು ರಾಮೇಶ್ವರಕ್ಕೆ ಹೋಗುವುದಾಗಿ ತಿಳಿಸಿದಾಗ, ಅವರು ಆ ಗ್ರಂಥವನ್ನು ಹೊತ್ತುಕೊಂಡು ಎಲ್ಲೆಡೆ ಏಕೆ ಅಲೆಯಬೇಕು, ಅದನ್ನು ಇಲ್ಲೇ ಇಟ್ಟಿದ್ದು ಹಿಂತಿರುಗಿ ಹೋಗುವಾಗ ತೆಗೆದುಕೊಂಡು ಹೋಗಬಹುದು ಎಂದು ಸೂಚಿಸಿದನು. ಅವರು ಹೊರಟ ನಂತರ ಆ ಸೋದರಮಾವನು ಆ ಗ್ರಂಥವನ್ನು ಸಂಪೂರ್ಣವಾಗಿ ಸುಟ್ಟು ಬೂದಿಮಾಡಿದನು. ಪದ್ಮಪಾದರು ಹಿಂತಿರುಗಿದಾಗ ಮೊಸಳೆ ಕಣ್ಣೀರು ಸುರಿಸಿ ಮನೆಗೇ ಬೆಂಕಿ ಬಿದ್ದು ಅದು ಸುಟ್ಟುಹೋಯಿತೆಂದು ತಿಳಿಸಿದನು. ಪದ್ಮಪಾದರು, "ಪರವಾಯಿಲ್ಲ, ನನ್ನ ಬುದ್ಧಿ ನಷ್ಟವಾಗಿಲ್ಲ. ನನ್ನ ನೆನಪಿನ ಸಾಮರ್ಥ್ಯದಿಂದ ಮತ್ತೆ ಬರೆಯಬಲ್ಲೆ. ನಿಮ್ಮ ಮನೆ ಸುಟ್ಟುಹೋದುದು ನನಗೆ ತುಂಬಾ ದುಃಖ ತಂದಿದೆ," ಎಂದರು. ಇದನ್ನು ಕೇಳಿದ ಸೋದರಮಾವನಿಗೆ ಇನ್ನೂ ದಿಗಿಲಾಯಿತು. ಪದ್ಮಪಾದರ

ಜೀವನವನ್ನೇ ಮುಗಿಸಿಬಿಡಬೇಕೆಂದು ಆ ಸೋದರಮಾವನು ಅವರ ಊಟದಲ್ಲಿ ವಿಷ ಸೇರಿಸಿದನು. ಅದನ್ನು ತಿಂದ ಪದ್ಮಪಾದರ ಉದರದಲ್ಲಿ ಸಹಿಸಲಸಾಧ್ಯವಾದ ಸಂಕಟವಾಯಿತು. ಆಗ ಅವರು ತಮ್ಮ ಆರಾಧ್ಯ ದೇವರಾದ ಶ್ರೀನೃಸಿಂಹಸ್ವಾಮಿಯನ್ನು ಸ್ಮರಿಸಿದರು. ಸ್ತೋತ್ರಮಾಡಿದರು. ಶ್ರೀನೃಸಿಂಹಸ್ವಾಮಿಯ ಕೃಪೆಯಿಂದ ಅವರ ಜೀವ ಉಳಿಯಿತು. ಆದರೆ ಪದ್ಮಪಾದರು ತಮ್ಮ ತತ್ವಪ್ರತಿಪಾದನಾ ಶಕ್ತಿಯನ್ನೂ, ಸ್ಮರಣ ಶಕ್ತಿಯನ್ನೂ ಕಳೆದುಕೊಂಡರು. ಕೂಡಲೇ ಅಹೋಬಿಲದಿಂದ ಶೃಂಗೇರಿಗೆ ಬಂದು ಗುರುಗಳಿಗೆ ಶಿರಬಾಗಿ ನಮಿಸಿ ಅಶ್ರುಧಾರೆ ಸುರಿಸಿದರು. ನಡೆದುದೆಲ್ಲವನ್ನೂ ಕೇಳಿ ಶಂಕರರು ವಾತ್ಸಲ್ಯದಿಂದ ಅವರನ್ನು ಆಲಂಗಿಸಿಕೊಂಡು, ಸಂತೈಸುತ್ತಾ, "ಚಿಂತಿಸಬೇಡ. ನನಗೆ ಅದನ್ನು ನೀನು ಓದಿದ್ದೆ. ನನ್ನ ಸ್ಮರಣ ಶಕ್ತಿಯಿಂದ ಅದನ್ನು ಮತ್ತೆ ಹಾಗೇ ಬರೆಯೋಣ" ಎಂದು ಪುನಃ ಹೇಳಿ ಬರೆಸಿದರು. ಗುರುಗಳ ಆಶೀರ್ವಾದದಿಂದ ಅವರ ಸ್ಮರಣ ಶಕ್ತಿಯು ಮೊದಲಿನಂತಾಯಿತು.

ಶಂಕರರು ದಿಗ್ವಿಜಯ ಮಾಡುತ್ತಾ ಸೌರಾಷ್ಟ್ರದೇಶದ ದ್ವಾರಕಾ ಕ್ಷೇತ್ರಕ್ಕೆ ಬಂದರು. ಇದು ಗುಜರಾತ್ ರಾಜ್ಯದ ಗೋಮತೀ ನದೀ ತೀರದಲ್ಲಿದೆ. ಅಲ್ಲಿ ಆಗ 'ಪಾಂಚರಾತ್ರ' ಮತದ ಪ್ರಭಾವ ಬಹಳವಾಗಿತ್ತು. ಆಚಾರ್ಯರು ಆ ಮತದ ದೋಷಗಳನ್ನು ತೋರಿಸಿ, ಅವುಗಳನ್ನು ದೂರೀಕರಿಸಿದರು. ಅಲ್ಲಿ ಒಂದು ಮಠವನ್ನು ಸ್ಥಾಪಿಸಿ ಆ ಪೀಠಕ್ಕೆ ಪದ್ಮಪಾದಾಚಾರ್ಯರನ್ನು ಪೀಠಾಧಿಪತಿಗಳನ್ನಾಗಿ ನೇಮಿಸಿದರು. ಅದು ಭಾರತದ ಪಶ್ಚಿಮದ ಆಮ್ನಾಯ ಪೀಠವಾಯಿತು. ಹಾಗೂ ಸಾಮವೇದ ಸಂಬಂಧ ಪಡೆದ ಪೀಠವಾಯಿತು.

(ಮುಂದುವರಿಯುತ್ತದೆ)

## ಪ್ರಹಸನ ಪ್ರಸಂಗ

**ಈ** ಜಗತ್ತಿನಲ್ಲಿ ಯೋಗ್ಯವಾದುದನ್ನು ಪಡೆಯಬೇಕಾದರೆ, ಅದನ್ನು ಪಡೆಯುವ ಯೋಗ್ಯತೆ ನಮಗಿರಬೇಕು. ಕೃತಕ ವ್ಯಕ್ತಿತ್ವವುಳ್ಳವರು ಕೃತಕವಾದುದನ್ನೇ ಬಯಸುತ್ತಾರೆ, ನೈಜತೆಯ ಸೌಂದರ್ಯವನ್ನು ಅವರು ಸವಿಯಲಾರರು. ಆದರೆ ಆಧ್ಯಾತ್ಮಿಕ ಜೀವನದಲ್ಲಿ ಇಂತಹ ಕೃತಕತೆ ನಡೆಯುವುದಿಲ್ಲ. ಅಲ್ಲಿ ಎಲ್ಲವೂ ಸಹಜ. ಇಂದಿನ ವಾಣಿಜ್ಯ ಯುಗದಲ್ಲಿ ಸಹಜತೆಯೂ ಅಸಹಜವಾಗುವಂತಾಗಿದೆ!

ಒಂದು ವಿಶ್ವವಿದ್ಯಾನಿಲಯದ ಭವ್ಯ ಕಟ್ಟಡದ ಮುಂದೆ ರಸ್ತೆಯ ಬದಿಯಲ್ಲಿ, ಒಬ್ಬನು ಕೆಲವು ಕಾಗದ ಪತ್ರಗಳನ್ನು ಇಟ್ಟುಕೊಂಡು ಕುಳಿತಿದ್ದನು. ರಸ್ತೆಯಲ್ಲಿ ಹೋಗುತ್ತಿರುವವರನ್ನೆಲ್ಲ ಕೈಬೀಸಿ ಕರೆಯುತ್ತಿದ್ದನು. ಅದೇ ರಸ್ತೆಯಲ್ಲಿ ಬರುತ್ತಿದ್ದ ಕುದುರೆ ಸವಾರನೊಬ್ಬನ ಗಮನ ಆ ವ್ಯಕ್ತಿಯ ಕಡೆ ಹರಿಯಿತು. ಆತ ಕುತೂಹಲದಿಂದ ಬಂದು "ಏನು ಆ ಪತ್ರಗಳು?" ಎಂದು ವಿಚಾರಿಸಿದನು.

"ಅವು ಡಿಗ್ರಿ ಸರ್ಟಿಫಿಕೆಟುಗಳು."

"ಓ! ಹೌದಾ! ಇಲ್ಲೇಕಿವೆ ಅವು?"

"ಮಾರಾಟಕ್ಕಿವೆ."

"ಎಷ್ಟು ಒಂದು ಸರ್ಟಿಫಿಕೆಟ್ಟಿಗೆ?"

"ನಿಮಗೆ ಯಾವ ಸರ್ಟಿಫಿಕೆಟ್ ಬೇಕು?"

"ಎಂ.ಎ. ಸರ್ಟಿಫಿಕೆಟ್."

"ಕೇವಲ ನೂರು ರೂಪಾಯಿ."

ಕುದುರೆ ಸವಾರನು ಕೂಡಲೆ ಜೇಬಿನಿಂದ ಹಣ ತೆಗೆದು ಕೊಟ್ಟು, ಒಂದು ಸರ್ಟಿಫಿಕೆಟ್ ತೆಗೆದುಕೊಂಡು ಹೊರಟನು. ಸ್ವಲ್ಪ ದೂರ ಹೋದಮೇಲೆ ತನ್ನ ಕುದುರೆಗೂ ಒಂದು ಸರ್ಟಿಫಿಕೆಟ್ ಕೊಂಡುಕೊಳ್ಳಬಹುದಲ್ಲ ಎನಿಸಿತು ಅವನಿಗೆ. ಆತ ಹಿಂದಿರುಗಿ ಬಂದು, "ನನ್ನ ಕುದುರೆಗಾಗಿ ಇನ್ನೊಂದು ಸರ್ಟಿಫಿಕೆಟ್ ಕೊಡಿ" ಎಂದು ಕೇಳಿದ.

ಆ ವ್ಯಕ್ತಿ : "ಇಲ್ಲ ಕೊಡಲಾಗುವುದಿಲ್ಲ."

ಕುದುರೆ ಸವಾರ : "ಏಕೆ ಆಗುವುದಿಲ್ಲ?"

ಆ ವ್ಯಕ್ತಿ : "ಈ ಸರ್ಟಿಫಿಕೇಟುಗಳಿರುವುದು ಎಮ್ಮೆಗಳಿಗಾಗಿ ಮಾತ್ರ!"

❖ ❖ ❖

ದೇವರು ನಮ್ಮ ಮಾತು ಮನಸ್ಸಿಗೆ ನಿಲುಕದ ವಿಷಯ. ಆದರೂ ಪ್ರತಿಯೊಬ್ಬರೂ ತಮ್ಮದೆ ಆದ ರೀತಿಯಲ್ಲಿ ದೇವರನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹಾಗೆ ಕಲ್ಪಿಸಿಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ಆದರೆ ತಮ್ಮ ಕಲ್ಪನೆಯೇ ಸತ್ಯ, ಅದನ್ನೇ ಎಲ್ಲರೂ ಒಪ್ಪಿಕೊಳ್ಳಬೇಕು, ಇಲ್ಲವೇ ಸಾಯಬೇಕು ಎಂದು ಭಾವಿಸುವುದು ಅತ್ಯಂತ ಮೂರ್ಖತನ ಮಾತ್ರವಲ್ಲ, ಬಾಲಿಶತನವೂ ಹೌದು.

ಒಂದು ಕ್ಲಾಸ್ ರೂಮಿನಲ್ಲಿ ಮಕ್ಕಳು ಚಿತ್ರ ಬಿಡಿಸುತ್ತಿದ್ದರು. ಉಪಾಧ್ಯಾಯನು ಸುತ್ತಾಡುತ್ತ ಯಾರ್ಯಾರು ಏನೇನು ಚಿತ್ರ ಬಿಡಿಸುತ್ತಿದ್ದಾರೆ ಎಂದು ಪರಿಶೀಲಿಸುತ್ತಿದ್ದ. ಓರ್ವ ಚಿಕ್ಕ ಹುಡುಗಿ ತುಂಬ ಆಸಕ್ತಿಯಿಂದ ಚಿತ್ರ ಬಿಡಿಸುತ್ತಿದ್ದಳು. ಉಪಾಧ್ಯಾಯನು ಆಕೆಯ ಹತ್ತಿರ ಹೋಗಿ, "ಏನು ಬರೆಯುತ್ತಿದ್ದೀಯೆ?" ಎಂದು ವಿಚಾರಿಸಿದ.

"ನಾನು ದೇವರ ಚಿತ್ರ ಬಿಡಿಸುತ್ತಿದ್ದೇನೆ"—ಹುಡುಗಿ ಹೇಳಿದಳು. ಉಪಾಧ್ಯಾಯನು ಚಕಿತನಾಗಿ, "ದೇವರು ಹೇಗಿದ್ದಾನೆಂದು ಯಾರಿಗೂ ತಿಳಿಯದು!" ಎಂದು ಪ್ರಶ್ನಾರ್ಥಕವಾಗಿ ಕೇಳಿದ.

ಹುಡುಗಿ ಕೂಡಲೆ ತಲೆ ಎತ್ತಿ ಉಪಾಧ್ಯಾಯನ ಕಡೆ ನೋಡಿ ಹೇಳಿದಳು : "ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಅವರಿಗೆ ತಿಳಿಯುತ್ತದೆ." ◆